


## ಸಂಘರ್ಷ ವಲಯದಲ್ಲಿಯೂ ಮಹಿಳೆ

ಮಹಿಳೆಯರಿಗೆ ಪ್ರವೇಶದ ಬಾಗಿಲು ಮುಚ್ಚಿ, ತರಬೇತು ನೀಡದೆ, ಅವಕಾಶವಂಚಿತರಾಗಿಸಿದ ಸಮಾಜ ಮತ್ತು ಸರ್ಕಾರ, ದೇಶದ ತುರ್ತು ಸಮಯದಲ್ಲಿ ಇದೇ ಮಹಿಳೆಯರ ಸಹಾಯವನ್ನು ಬೇಡಿತ್ತು.


'ಕನಿಷ್ಠ ಸೌಕರ್ಯಗಳು ಇಲ್ಲದ ಸಂಘರ್ಷ ವಲಯಗಳಿಗೆ ಮಹಿಳೆಯರನ್ನು ಕಳುಹಿಸಲು ಆಗುವುದಿಲ್ಲ' ಎಂಬುದು ಕೂಡಾ ನಮ್ಮ ಸರ್ಕಾರದ ವಾದವಾಗಿತ್ತು. ಆದರೆ ಇದೇ ಸರ್ಕಾರ ನ್ಯಾಯಾಲಯದ ಎದುರು ಇಂತಹ ಕಾನ್‌ಫ್ಲಿಕ್ಟ್ ಜೋನ್‌ಗಳಿಗೂ ಶೇಕಡ 30ರಷ್ಟು ಮಹಿಳೆಯರನ್ನು ಡೆಪ್ಯೂಟ್ ಮಾಡಿರುವುದನ್ನು ಒಪ್ಪಿಕೊಂಡಿತು. ಇದು ನಿಜಕ್ಕೂ ದ್ವಿಮುಖ ಧೋರಣೆ. ಮಹಿಳೆಯರಿಗೆ ಸವಾಲಿನಂತಹ ಕೆಲಸವನ್ನು ಕೊಟ್ಟರೂ, ಆಕೆಗೆ ಸಮಾನ ಸ್ಥಾನಮಾನ ನೀಡಲು ನಿರಾಕರಿಸುವ ಅನ್ಯಾಯದ ಧೋರಣೆ. ಇಂತಹ ತಾರತಮ್ಯವನ್ನು ಸುಪ್ರೀಂ ಕೋರ್ಟ್ ಬಯಲಿಗೆಳೆದು ಖಂಡಿಸಿದೆ.

ವಿಷಮ ಪರಿಸ್ಥಿತಿಯಲ್ಲಿ ಮಹಿಳೆಯರು ಅಸಾಧಾರಣ ಧೈರ್ಯವನ್ನು ಪ್ರದರ್ಶಿಸಿದ ನಿದರ್ಶನಗಳು ಸಾಕಷ್ಟು ಇವೆ. ವಿಂಗ್ ಕಮಾಂಡರ್ ಅಭಿನಂದನ್ ಅವರು ಪಾಕಿಸ್ತಾನದ ಎಫ್–16 ಯುದ್ಧ ವಿಮಾನವನ್ನು ಹೊಡೆದುರುಳಿಸುವಾಗ ಅವರಿಗೆ ಫ್ಲೈಟ್ ಕಂಟ್ರೋಲರ್ ಆಗಿ ಮಾರ್ಗದರ್ಶನ ನೀಡಿದ್ದು ಮಿಂಟಿ ಅಗರ್ವಾಲ್ ಎಂಬ ಮಹಿಳೆ. ಆಕೆಗೆ ಯುದ್ಧಸೇವಾ ಮೆಡಲ್ ಅನ್ನೂ ನೀಡಲಾಗಿದೆ. ಕಾಬೂಲ್‌ನಲ್ಲಿ ಭಾರತದ ದೂತಾವಾಸದ ಮೇಲೆ ಉಗ್ರರು ದಾಳಿ ನಡೆಸಿದ ಮಿತಾಲಿ ಮಧುಮಿತಾ ಎಂಬ ಅಧಿಕಾರಿ ಅಸಾಧಾರಣ ಶೌರ್ಯ ಪ್ರದರ್ಶಿಸಿದ್ದರು. ಆಕೆಗೆ ಸೇನಾ ಮೆಡಲ್ ನೀಡಲಾಗಿತ್ತು.

'ಸುಪ್ರೀಂ ಕೋರ್ಟಿನ ಈ ತೀರ್ಪಿನಿಂದ ಸಮಾನ ಅವಕಾಶಗಳು ದೊರೆಯಲಿವೆ. ಸೇನಾ ಅಧಿಕಾರಿಗಳು ಕೋರ್ಟ್ ಅನ್ನು ತಪ್ಪು ದಾರಿಗೆ ಎಳೆಯುವ ಪ್ರಯತ್ನ ಮಾಡಿದ್ದನ್ನು ತೀರ್ಪಿನಲ್ಲಿ ಪ್ರಸ್ತಾಪಿಸಲಾಗಿದೆ' ಎಂದು ಮಹಿಳಾ ಅಧಿಕಾರಿಗಳ ಪರ ವಕೀಲರಾದ ಮೀನಾಕ್ಷಿ ಲೇಖಿ ಪ್ರತಿಕ್ರಿಯಿಸಿದ್ದಾರೆ.

ಸುಪ್ರೀಂ ಕೋರ್ಟಿನ ಈ ತೀರ್ಪು ಮಹಿಳಾ ಕರ್ನಲ್ ಇನ್ನು ಮುಂದೆ 850 ಪುರುಷ ಸೈನಿಕರನ್ನು ಹೊಂದಿದ ಬೆಟಾಲಿಯನ್ನಿನ ಮುಖ್ಯಸ್ಥೆಯಾಗಿ, ಆ ಪಡೆಯನ್ನು ಮುನ್ನಡೆಸಲು ಸಾಧ್ಯವಾಗಿಸಿದೆ.

ಕಮಾಂಡರ್‌ಗಳಿಗೆ ಅರ್ಹತೆ ಆಧಾರದ ಮೇಲೆ ಬ್ರಿಗೇಡಿಯರ್, ಮೇಜರ್ ಜನರಲ್, ಲೆಫ್ಟಿನೆಂಟ್ ಜನರಲ್ ಮಾತ್ರವಲ್ಲ, ಭೂಸೇನೆಯ ಮುಖ್ಯಸ್ಥರಾಗಿ ನೇಮಕಗೊಳ್ಳಲು ಅವಕಾಶವಿದೆ. ಆದರೆ, ಶಸ್ತ್ರಸಜ್ಜಿತ ಪಡೆಗಳ ಭಾಗವಾಗದೇ ಈ ಹುದ್ದೆಗಳು ದೊರೆಯುವುದು ಅಸಂಭವ. ಶಸ್ತ್ರಸಜ್ಜಿತ ಪಡೆಗಳ ಭಾಗವಾಗಲು ಮಹಿಳಾ ಅಧಿಕಾರಿಗಳಿಗೆ ಇನ್ನೂ ಅವಕಾಶವಿಲ್ಲದ ಕಾರಣ ಇಂತಹ ಉನ್ನತ ಹುದ್ದೆಗಳು ಅವರಿಗೆ ಸದ್ಯಕ್ಕೆ ಒಲಿಯಲಾರವು.



ಯುದ್ಧರಂಗಕ್ಕೆ ಕಾಲಿಟ್ಟ ಗುಂಜನ್ ಸಕ್ಸೇನಾ

ಆದರೂ ಕಮಾಂಡರ್‌ಗಳಿಗೆ ಸ್ವತಂತ್ರವಾಗಿ ನಿರ್ಣಯ ಕೈಗೊಳ್ಳುವ ಅಧಿಕಾರ ಇರುವುದರಿಂದ ಸೇನೆಯಲ್ಲಿ ಇನ್ನು ಮುಂದೆ ಮಹಿಳೆಯರು ಮಹತ್ವದ ಪಾತ್ರ ನಿರ್ವಹಿಸಲು ಸಾಧ್ಯವಿದೆ. ಸೇನೆಯ ಎಂಜಿನಿಯರಿಂಗ್ ವಿಭಾಗ, ಗೂಢಚರ್ಯೆ ವಿಭಾಗ ಮತ್ತು ಸಿಗ್ನಲ್ ವಿಭಾಗದ ಮುಖ್ಯಸ್ಥರ ಹೊಣೆ ಹೊರಲು ಮಹಿಳಾ ಅಧಿಕಾರಿಗಳಿಗೆ ಇನ್ನು ಅವಕಾಶವಿದೆ.

ಇಸವಿ 2003ರಿಂದಲೂ ತಮ್ಮ ಹಕ್ಕಿಗಾಗಿ ಹೋರಾಟ ನಡೆಸಿದ ಸೇನೆಯ ಮಹಿಳೆಯರನ್ನು ನಾವು ಇಂದು ತುಂಬು ಹೃದಯದಿಂದ ಶ್ಲಾಘಿಸಬೇಕಿದೆ. ನಮ್ಮ ದೇಶದ ಭೂಸೇನೆಯಲ್ಲಿ 10 ಸಾವಿರದಷ್ಟು ಸೇನಾಧಿಕಾರಿಗಳ ಸಂಖ್ಯೆಯಲ್ಲಿ ಕೊರತೆ ಇದೆ. ಮಹಿಳೆಯರಿಗೆ ಕಾಯಂ ಹುದ್ದೆ ನೀಡುವ ಮೂಲಕ, ಈ ಕೊರತೆಯನ್ನು ಒಂದಿಷ್ಟಾದರೂ ತುಂಬಬಹುದಿದೆ. ಮಹಿಳೆಯರಿಗೆ ಸಮಾನ ಅವಕಾಶಗಳನ್ನು ನೀಡುವುದರಿಂದ ಸೇನೆಗೆ ಲಾಭವಿದೆ ಮತ್ತು ದೇಶಕ್ಕೆ ರಕ್ಷಣೆಯಿದೆ.

ಪ್ರತಿಕ್ರಿಯಿಸಿ: ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in